ರಿಂದ ವಿದ್ಯಾಖಾತೆಯವರು ಡಿ.ಎಚ್.ಪಿ.ಸಿ. ಅವರ ಮತ್ತು ಲಾ – ಇಲಾಖೆಯವರ ಅಭಿಪ್ರಾಯ ಕೇಳಿದ್ದಾರೆ. ಅವರ ಅಭಿಪ್ರಾಯ ತಿಳಿದನಂತರ ಮುಂದಿನ ಕ್ರಮ ಕೈಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಮುಕುಂದರಾವ್.—ಪ್ರೌಢಶಾಲೆಯ ಮುಖ್ಯೋಪಾಧ್ಯಾಯರೊಬ್ಬರು ರಿಟೈರ್ ಆಗಿ ಕೆಲವು ತಿಂಗಳಾಯಿತು. ಅವರ ವಿಶ್ರಾಂತಿ ವೇತನ ಇನ್ನೂ ನಿಶ್ಚಯವಾಗಿಲ್ಲ. ಆದ್ದರಿಂದ ಆದಷ್ಟು ಬೇಗ ಅವರ ವಿಶ್ರಾಂತಿ ವೇತನವನ್ನು ನಿಶ್ಚಯ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಈ ಕೇಸ್ ಸರ್ಕಾರದಿಂದ ತಡವಾಗಿಲ್ಲ ಮತ್ತು ಸರ್ಕಾರದವರು ಮಾಡುವುದಕ್ಕಾಗುವುದಿಲ್ಲ. ತಾಲ್ಲೂಕ್ ಬೋರ್ಡಿನವರು ತೀವ್ರವಾದ ಕ್ರಮ ಕೈಕೊಳ್ಳದಿರುವುದರಿಂದ ನಿಧಾನವಾಗಿದೆ.

ಶ್ರೀ ಸಿ. ಎಸ್. ಬಾಲಕೃಷ್ಣಗೌಡ.—(ಇ) ಪ್ರಶ್ನೆಗೆ ಉತ್ತರವಾಗಿ 'ಈ ವಿಷಯವು ಸರ್ಕಾರದವರ ಪರಿಶೀಲನೆಯಲ್ಲಿದೆ' ಎಂದು ಹೇಳಿದ್ದೀರಿ. ಅಂದರೆ ನಿರ್ವಹಣಾಧಿಕಾರಿಯವರದ್ದು ತಪ್ಪಾಗಿದೆ ಎಂಬುದನ್ನು ಒಪ್ಪಿಕೊಂಡಿದ್ದೀರಿ. ಈ ಬಗ್ಗೆ ಅವರ ಮೇಲೆ ಎಕ್ಸ್‌ಪ್ಲನೇಷನ್ ಕಾಲ್‌ಫಾರ್ ಮಾಡಿದ್ದೀರಾ ಅಥವಾ ಏನಾದರೂ ಕ್ರಮ ತೆಗೆದುಕೊಂಡಿದ್ದೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ಇಲ್ಲಿ ನಿರ್ವಹಣಾಧಿಕಾರಿಯವರದ್ದು ಏನೂ ತಪ್ಪಿಲ್ಲ. ಮುಖ್ಯೋಪಾಧ್ಯಾಯರ ವಿಶ್ರಾಂತಿ ವೇತನಕ್ಕೆ ಸಂಬಂಧಪಟ್ಟ ಕಾಗದಪತ್ರಗಳನ್ನು ಕಳುಹಿಸಿದಂತೆ ತಾಲ್ಲೂಕ್ ಬೋರ್ಡಿನ ಅಧ್ಯಕ್ಷರು ನಿರ್ಣಯ ತೆಗೆದುಕೊಂಡಿದ್ದಾರೆ. ಮತ್ತು ಸರ್ಕಾರದ ನಿಯಮಾವಳಿಯನ್ನೇ ಪ್ರಶ್ನಿಸಿದ್ದಾರೆ. ಇದು ಮೂಲಭೂತವಾದ ಪ್ರಶ್ನೆಯಾದ್ದರಿಂದ ಕಾನೂನು ಇಲಾಖೆಯ ಸಲಹೆಯನ್ನು ಕೇಳಿದ್ದೇವೆ. ಅವರ ಸಲಹೆ ಬಂದನಂತರ ತೀವ್ರವಾದ ಕ್ರಮ ಕೈಕೊಳ್ಳುತ್ತೇವೆ.

ಶ್ರೀ ಎಸ್. ಮುಕುಂದರಾವ್.—ವಿದ್ಯಾ ಇಲಾಖೆಯ ಅಭಿಪ್ರಾಯವಲ್ಲಿ ಈ ನಿಯಮಗಳು ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ನಡೆಸುತ್ತಿರುವ ಪ್ರೌಢಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಉಪಾಧ್ಯಾಯರುಗಳಿಗೆ ಅನ್ವಯಿಸುವುದಿಲ್ಲವೇ ?

ಶ್ರೀ ಎನ್. ಎಂ. ಕೊಟ್ರಬಸಯ್ಯ ಸೋಗಿ.—ವಿದ್ಯಾ ಇಲಾಖೆಯ ನಿಯಮಾವಳಿಯ ಪ್ರಕಾರ ಧನ ಪಡೆಯುವಂತಹ ಎಲ್ಲಾ ಸಂಸ್ಥೆಗಳೂ ಸಹ ಅನುಸರಿಸಬೇಕೆಂದು ಇವೆ. ಆದರೆ ಈ ಕಾರ್ಯಕ್ಕೆ ತಾಲ್ಲೂಕ್ ಅಭಿವೃದ್ಧಿ ಮಂಡಲಿಯವರು ತಮ್ಮ ರೂಲ್ಸ್‌ನಲ್ಲಿ ಈ ಬಗ್ಗೆ ಪ್ರಾವಿಜನ್ ಇಲ್ಲ ಎಂದು ಪ್ರಶ್ನೆ ಮಾಡಿರುವುದರಿಂದ ನಾವು ಕಾನೂನು ಇಲಾಖೆಯ ಮತ್ತು ಡಿ.ಎಚ್.ಪಿ.ಸಿ.ಯ ಒಪ್ಪಿಗೆ ಪಡೆಯಬೇಕಾಗಿದೆ.

Construction of New Building for the Mysore High Court

178. Sri K. SURYANARAYANA ADIGA (Local Authorities' Constituency).—

Will the Minister for Law, Labour and Parliamentary Affairs be pleased to state :—

(*a*) whether any representation has been made to the Government for constructing a new and elegant building for the Mysore High Court ;

(*b*) whether it has come to the notice of the Government that the Bangalore Advocates Association represented in July 1969 to the Union Home Minister, requesting for a new building for the High Court ;

(SRI K. SURYANARAYANA ADIGA)

(*c*) whether the Government think it proper to construct a new and beautiful building for the Mysore High Court ?

Sri K. PUTTASWAMY (Minister for Law, Labour and Parliamentary Affairs).—

(*a*) No.

(*b*) Yes. An oral representation was made.

(*c*) No.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ದಿವಂಗತ ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ಹೊಂಬೇಗೌಡರು ರಾಜ್ಯದ ಶ್ರೇಷ್ಠ ನ್ಯಾಯಾಲಯಕ್ಕೆ ಪ್ರತ್ಯೇಕವಾದ ಒಂದು ಕಟ್ಟಡವನ್ನು ಮಾಡಬೇಕೆನ್ನುವ ಆಸೆ ಹೊಂದಿದ್ದರು ಎನ್ನುವುದು ಸರಕಾರವ ಗಮನಕ್ಕೆ ಬಂದಿದೆಯೇ ?

ಶ್ರೀ ಕೆ. ಪುಟ್ಟಸ್ವಾಮಿ.—ಹಾಗೆ ಹೇಳಿದರು ಎಂದು ಗೊತ್ತಾಗಿದೆ.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—ಹೈಕೋರ್ಟಿಗೆ ಒಂದು ಪ್ರತ್ಯೇಕವಾದ ಕಟ್ಟಡವನ್ನು ಕಟ್ಟಿಸಿ ಕೊಡುವುದರಿಂದ ಈಗ ಇರುವ ಹಳೆಯ ಕಟ್ಟಡದಲ್ಲಿ ಬಾಡಿಗೆಯಲ್ಲಿರುವ ಎರ್ಲಾ ಸರಕಾರದ ಕಚೇರಿಗಳನ್ನೂ ಒಂದೇ ಕಡೆ ಇರುವಂತೆ ಮಾಡುವುದಕ್ಕಾಗುವುದಿಲ್ಲವೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರ ಸಲಹೆ ಉಚಿತವಾದುದೇ ಆಗಿದೆ. ಆದರೆ ಹೈಕೋರ್ಟು ಕಟ್ಟಡವನ್ನು ಕಟ್ಟುವುದಕ್ಕೆ ಯೋಗ್ಯವಾದ ನಿವೇಶನ ಇದುವರೆಗೂ ದೊರತಿಲ್ಲ. ಆ ಕಾರಣದಿಂದ ದಿವಂಗತ ಹೊಂಬೇಗೌಡರು ಈಗಿರುವ ಹೈಕೋರ್ಟು ಬಿಲ್ಡಿಂಗನ್ನೇ ಬಡಾಯಿಸಿ ಹೈಕೋರ್ಟಿಗೆ ಸಾಕಾಗುವಷ್ಟು ಕಟ್ಟಡವನ್ನು ಕಟ್ಟಬೇಕೆಂದು ಅವರು ಅಭಿಲಾಷೆ ಹೊಂದಿದ್ದರು.

3-00 P.M.

ಶ್ರೀ ಕೆ. ಸೂರ್ಯನಾರಾಯಣ ಅಡಿಗ.—(ಎ) ಗೆ ಉತ್ತರವಾಗಿ "ನೋ" ಎಂದಿದೆ. ಆದರೆ ನಾನು ಇದೇ ಮಾನ್ಯ ಸಭೆಯಲ್ಲಿ ಎರಡು ಸಾರಿ ಸರಕಾರಕ್ಕೆ ರೆಪ್ರಸೆಂಟೇಷನ್ ಮಾಡಿದ್ದೆ. ಇದು ರೆಪ್ರಸೆಂಟೇಷನ್ ಆಗುವುದಿಲ್ಲವೇ ? ಇದಕ್ಕೆ ಪ್ರತ್ಯೇಕವಾದ ರೆಪ್ರಸೆಂಟೇಷನ್ ಎಂದು ಕೊಡಬೇಕಾಗಿತ್ತೇ ?

ಶ್ರೀ ಕೆ. ಪುಟ್ಟಸ್ವಾಮಿ.—ಮಾನ್ಯ ಸದಸ್ಯರು ರೆಪ್ರಸೆಂಟೇಷನ್ ಎಂದು ಭಾವನೆ ಮಾಡಿದ್ದಾರೆ. ಅವರು ಕೊಟ್ಟಂತಹದ್ದು ಸಲಹೆಗಳು ಎಂದು ಸರಕಾರ ಗಮನಕ್ಕೆ ತೆಗೆದುಕೊಳ್ಳುತ್ತಾರೆ.

ಶ್ರೀ ಎ. ಎಚ್. ಶಿವಾನಂದಸ್ವಾಮಿ.—ನಿವೇಶನ ತೋರಿಸಿದರೆ ಹೈಕೋರ್ಟಿಗೆ ಪ್ರತ್ಯೇಕವಾದ ಕಟ್ಟಡ ಕಟ್ಟಿಸಿ ಕೊಡುತ್ತೀರಾ ?

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೇಷ್ಠ ನ್ಯಾಯಾಲಯ ಹಾಗೂ ಉಳಿದ ಸಿವಿಲ್ ನ್ಯಾಯಾಲಯ ಗಳು ಇವೆರಡೂ ಒಂದೇ ಕಡೆ ಇರಲು ಹೈಕೋರ್ಟು ಅಷ್ಟು ಒಪ್ಪುವುದಿಲ್ಲ. ಪ್ರತ್ಯೇಕವಾದ ಜಾಗದಲ್ಲಿ ಹೈಕೋರ್ಟು ಕಟ್ಟಬೇಕೆಂದು ಅವರ ಅಪೇಕ್ಷೆ. ಮತ್ತು ಈಚೆಗೆ ಇವರ ಬಗ್ಗೆ ವಿಚಾರ ಮಾಡಲಾಗಿ ಈಗಿರತಕ್ಕ ಜಾಗದಲ್ಲೇ ಪ್ರತ್ಯೇಕವಾದ ಅನುಕೂಲಗಳನ್ನು ಮಾಡಲು ಕಟ್ಟಡ ಕಟ್ಟಿಸಿಕೊಡಬೇಕೆಂದು ಹೈಕೋರ್ಟಿನವರ ಅಭಿಪ್ರಾಯ ಎಂದು ಗೊತ್ತಾಗಿದೆ.

ಶ್ರೀ ಎಸ್. ಪಿ. ರಾಜಣ್ಣ.—ಎರ್ಲಾ ಕೋರ್ಟುಗಳೂ ಒಂದೇ ಕಡೆ ಇರಬೇಕೆಂದು ಕೇಳಿದರೆ ಇದಕ್ಕೆ ಹೈಕೋರ್ಟಿನವರು ಒಪ್ಪುವುದಿಲ್ಲ ಎಂದರೆ ಅವರಿಗಿರತಕ್ಕ ಅನಾನುಕೂಲಗಳೇನು ?

ಶ್ರೀ ಕೆ. ಪುಟ್ಟಸ್ವಾಮಿ.—ಶ್ರೇಷ್ಠ ನ್ಯಾಯಾಲಯ ಬಿಟ್ಟು ಬಾಕೀ ಕೋರ್ಟುಗಳೆರ್ಲಾ ಒಂದೇ ಕಡೆ ಇರಬೇಕೆಂದು ಇಲ್ಲಿರುವ ಅಡ್ವೋಕೇಟ್ಸ್ ಅಸೋಷಿಯೇಷನ್ನಿನವರು ಸರಕಾರದವನ್ನು ಕೇಳಿದ್ದಾರೆ.